ಕರ್ನಾಟಕ ಸರ್ಕಾರ-ಪೊಲೀಸ್ ಇಲಾಖೆ

**ಪೊಲೀಸ್ ಆಯುಕ್ತರ ಕಛೇರಿ, ಮಂಗಳೂರು ನಗರ, ಎ.ಬಿ.ಶೆಟ್ಟಿ ವೃತ್ತದ ಬಳಿ, ಮಂಗಳೂರು - 575001**

ಕ.ದೂ.ಸಂ : 0824-2220801, ಇ-ಮೇಲ್ : ccrmgc@ksp.gov.in

ಸಂಖ್ಯೆ: ಜಿ.ಎನ್.ಎಲ್-1/ 44/ಮಂ.ನ/2022 ದಿನಾಂಕ: -09 -2023

ರವರಿಗೆ,

ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು
ರಾಜ್ಯ ತಕ್ಷೀರು ಅಭಿಲೇಖಾ ಸಂಗ್ರಹಾಲಯ
7ನೇ ಮಹಡಿ, ಬಹು ಮಹಡಿಗಳ ಕಟ್ಟಡ
ಬೆಂಗಳೂರು - 560001

ಮಾನ್ಯರೇ,

ವಿಷಯ : ಮಾಹಿತಿ ಹಕ್ಕು ಅಧಿನಿಯಮ 2005 ರ ಕಲಂ: 4(1) (ಎ) & (ಬಿ) ಅನುಸಾರ ಮಂಗಳೂರು ನಗರ ಪೊಲೀಸ್ ಆಯುಕ್ತರ ಕಚೇರಿಗೆ ಸಂಬಂಧಿಸಿದ ಮಾಹಿತಿಯನ್ನು ಕರ್ನಾಟಕ ರಾಜ್ಯ ಪೊಲೀಸ್ ವೆಬ್‌ಸೈಟ್ ನಲ್ಲಿ ಪ್ರಕಟಿಸುವ ಬಗ್ಗೆ.

ಉಲ್ಲೇಖ: ಪೊಲೀಸ್ ಪ್ರಧಾನ ಕಛೇರಿಯ ಪತ್ರ ಸಂಖ್ಯೆ: ಜಿಸಿ/08/ ಆರ್.ಟಿ.ಐ/2023, ದಿನಾಂಕ: 22-09-2023.

*******

ಮಾಹಿತಿ ಹಕ್ಕು ಅಧಿನಿಯಮ 2005 ರ ನಿಯಮ 4(1) (ಎ) & (ಬಿ) ಅನುಸಾರ ಮಂಗಳೂರು ನಗರ ಪೊಲೀಸ್ ಆಯುಕ್ತರ ಕಛೇರಿಗೆ ಸಂಬಂಧಿಸಿದ ಮಾಹಿತಿಯನ್ನು ಕರ್ನಾಟಕ ರಾಜ್ಯ ಪೊಲೀಸ್ ವೆಬ್‌ಸೈಟ್ ನಲ್ಲಿ ಪ್ರಕಟಿಸುವಂತೆ ಉಲ್ಲೇಖಿತ ಪ್ರಧಾನ ಕಛೇರಿ ಪತ್ರದಲ್ಲಿ ಸೂಚಿಸಿರುತ್ತಾರೆ.

ಅದರಂತೆ ಮಂಗಳೂರು ನಗರ ಪೊಲೀಸ್ ಕಮಿಷನರೇಟ್ ಕಛೇರಿಗೆ ಸಂಬಂಧಿಸಿದ ಮಾಹಿತಿ ಹಕ್ಕು ಅಧಿನಿಯಮ 2005 ರ ನಿಯಮ 4(1) (ಎ) & (ಬಿ) ಗೆ ಸಂಬಂಧಿಸಿದ 2022-2023 ನೇ ಸಾಲಿನ ಪರಿಷ್ಕರಿಸಿದ ಮಾಹಿತಿಯನ್ನು ಕರ್ನಾಟಕ ರಾಜ್ಯ ಪೊಲೀಸ್ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕ್ರಮ ಕೈಗೊಳ್ಳುವಂತೆ ಕೋರಲಾಗಿದೆ.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ,

(ಅನುಪಮ್ ಅಗ್ರವಾಲ್, IPS )
ಪೊಲೀಸ್ ಆಯುಕ್ತರು,
ಮಂಗಳೂರು ನಗರ, ಮಂಗಳೂರು

ಪ್ರತಿ:

ಕಂಪ್ಯೂಟರ್ ವಿಭಾಗರವರಿಗೆ ಸೂಕ್ತ ಕ್ರಮಕ್ಕಾಗಿ.

## ಪೊಲೀಸ್ ಆಯುಕ್ತರ ಕಾರ್ಯಾಲಯ, ಮಂಗಳೂರು ನಗರ, ಮಂಗಳೂರು

ಭಾರತ ಸರ್ಕಾರದ ಮಾಹಿತಿ ಹಕ್ಕು ಅಧಿನಿಯಮ 2005 ರ ಪ್ರಕರಣ ಕಲಂ 4(1)(ಬಿ) ಅನುಸಾರ ಮಂಗಳೂರು ನಗರ ಪೊಲೀಸ್ ಆಯುಕ್ತರ ಕಛೇರಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಪ್ರಕಟಿಸುವ ಬಗ್ಗೆ

***********

ಭಾರತ ಸರ್ಕಾರವು ಜ್ಯಾರಿಗೆ ತಂದಿರುವ 2005 ರ ಮಾಹಿತಿ ಹಕ್ಕು ಕಾಯ್ದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಸಂಬಂಧ ಮಾಹಿತಿ ಹಕ್ಕು ಅಧಿನಿಯಮ 2005 ರ (central Act 22 of 2005 ) ಪ್ರಕರಣ ಕಲಂ 5(1), 5(2) ಮತ್ತು 19(1) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಪೊಲೀಸ್ ಇಲಾಖೆಗೆ ಸೇರಿದ ಮಾಹಿತಿಯನ್ನು ಕೋರುವ ವ್ಯಕ್ತಿಗಳಿಗೆ ಅಂತಹ ಮಾಹಿತಿಯನ್ನು ಮೇಲಿನ ಕಾಯ್ದೆಯನ್ವಯ ಒದಗಿಸಲು, ಮಾಹಿತಿ ಕೋರುವ ಅರ್ಜಿಗಳು ಅಥವಾ ಮೇಲ್ಮನವಿಗಳನ್ನು ಸ್ವೀಕರಿಸಲು ಅನುಕ್ರಮವಾಗಿ ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಪ್ರಥಮ ಮೇಲ್ಮನವಿ ಪ್ರಾಧಿಕಾರಿಗಳನ್ನಾಗಿ ಈ ಕೆಳಕಂಡಂತೆ ಪೊಲೀಸ್ ಪ್ರಧಾನ ಕಛೇರಿಯಿಂದ ನೇಮಿಸಲಾಗಿದೆ. (ಸರ್ಕಾರದ ಅಧಿಸೂಚನೆ ಸಂಖ್ಯೆ ಒಸಾಇ 22 ಸಶಾಶಾ2007ದಿನಾಂಕ: 27-02-2007.)

| ಕ್ರ. ಸಂ. | ಇಲಾಖೆಗಳ ಹೆಸರು | ಮಾಹಿತಿ ಪಡೆಯುವ ಹಕ್ಕು ಕಾಯ್ದೆ 2005 ರ ಸೆಕ್ಷನ್ 5(1)ರ ಪ್ರಕಾರ ಸಾರ್ವಜನಿಕ ಮಾಹಿತಿ ಅಧಿಕಾರಿ | ಮಾಹಿತಿ ಪಡೆಯುವ ಹಕ್ಕು ಕಾಯ್ದೆ 2005ರ ಸೆಕ್ಷನ್ 19(1) ರ ಪ್ರಕಾರ ಮೇಲ್ಮನವಿ ಪ್ರಾಧಿಕಾರ |
|---|---|---|---|
| 1 | ಪೊಲೀಸ್ ಆಯುಕ್ತರ ಕಛೇರಿ, ಮಂಗಳೂರು ನಗರ | ಸಹಾಯಕ ಆಡಳಿತಾಧಿಕಾರಿ ಪೊಲೀಸ್ ಆಯುಕ್ತರ ಕಛೇರಿ ಮಂಗಳೂರು ನಗರ | ಪೊಲೀಸ್ ಆಯುಕ್ತರು, ಮಂಗಳೂರು ನಗರ |
| 2 | ಪೊಲೀಸ್ ಉಪ ವಿಭಾಗ ಕಛೇರಿ, ಮಂಗಳೂರು ಕೇಂದ್ರ, ಉತ್ತರ ಮತ್ತು ದಕ್ಷಿಣ, ಸಂಚಾರ ಉಪ ವಿಭಾಗ | ಉಪ ವಿಭಾಗ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರಥಮ ದರ್ಜೆ ಸಹಾಯಕರು/ ಹಿರಿಯ ಬರಹಗಾರರು | ಪೊಲೀಸ್ ಉಪ ವಿಭಾಗಾಧಿಕಾರಿ |
| 3 | ಪೊಲೀಸ್ ನಿರೀಕ್ಷಕರು ಠಾಣಾಧಿಕಾರಿಯಾಗಿರುವ ಪೊಲೀಸ್ ಠಾಣೆಗಳು | ಪೊಲೀಸ್ ಉಪನಿರೀಕ್ಷಕರು (ಕಾ ಮತ್ತು ಸು) | ಪೊಲೀಸ್ ನಿರೀಕ್ಷಕರು |

ಕೇಂದ್ರ ಸರ್ಕಾರವು ಜ್ಯಾರಿಗೆ ತಂದಿರುವ 2005ರ ಮಾಹಿತಿ ಹಕ್ಕು ಕಾಯಿದೆ ಇದಾಗಿದ್ದು, ಸದರಿ ಕಾಯ್ದೆಯ ಕಲಂ 4(1) (ಬಿ) ರಡಿ ಒಟ್ಟು 17 ವಿವಿಧ ಅಂಶಗಳನ್ನೊಳಗೊಂಡ ಒಂದು ಕೈಪಿಡಿ ತಯಾರಿಸಬೇಕಾಗಿದ್ದು, ಈ ಪ್ರಾಧಿಕಾರದ ವ್ಯಾಪ್ತಿಗೆ ಬರುವ ಘಟಕಗಳ ಕಾರ್ಯ ಚಟುವಟಿಕೆಗಳ ಮಾಹಿತಿ ಈ ಕೆಳಕಂಡಂತಿರುತ್ತದೆ.

### ನಗರ ಘಟಕದ ಸಂರಚನೆ ಪ್ರಕಾರ್ಯಗಳು ಮತ್ತು ಕರ್ತವ್ಯದ ವಿವರಗಳು:

ಪೂರ್ವದಲ್ಲಿದ್ದ ದಕ್ಷಿಣ ಕನ್ನಡ ಜಿಲ್ಲೆ ಕ್ರಮವಾಗಿ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಮಂಗಳೂರು ನಗರವೆಂದು ಕಾರ್ಯರೂಪಕ್ಕೆ ಬಂದಿರುತ್ತದೆ. ಸರ್ಕಾರದ ಅಧಿಸೂಚನೆ ಸಂಖ್ಯೆ ಹೆಚ್ಡಿ 246/ಪಿಒಪಿ/2007 ದಿನಾಂಕ: 25-01-2010 ರಂತೆ ಹೊಸದಾಗಿ ಮಂಗಳೂರು ನಗರ ಪೊಲೀಸ್ ಆಯುಕ್ತರ ಕಛೇರಿಯು ಸೃಜನೆಗೊಂಡು ದಿನಾಂಕ: 26-01-2010 ರಂದು ಉದ್ಘಾಟನೆಗೊಂಡಿರುತ್ತದೆ.

### (ಅ) ಮಂಗಳೂರು ನಗರದ ಸಾಮಾನ್ಯ ಮಾಹಿತಿ:

| | |
|---|---|
| ಪೊಲೀಸ್ ಉಪವಿಭಾಗಗಳು | : 4 |
| ಪೊಲೀಸ್ ಠಾಣೆಗಳು | : 21 |
| ಭೌಗೋಳಿಕ ವಿಸ್ತೀರ್ಣ | : 1093.70 ಚ.ಕಿ.ಮೀ. |
| ಒಟ್ಟು ಜನಸಂಖ್ಯೆ | : 10,95,763 ( 2011 ನೇ ಜನಗಣತಿಯ ಪ್ರಕಾರ) |

### (ಆ) ಕಾರ್ಯ ವಿಧಾನ :

ಪೊಲೀಸ್ ಆಯುಕ್ತರು ಮಂಗಳೂರು ನಗರ ರವರು ಪೊಲೀಸ್ ಆಡಳಿತ ವ್ಯವಸ್ಥೆಯ ಮುಖ್ಯಸ್ಥರಾಗಿದ್ದು, ನಗರದ ಕಾನೂನು ಸುವ್ಯವಸ್ಥೆಯ ಬಗ್ಗೆ ಸಂಪೂರ್ಣ ಅಧಿಕಾರವುಳ್ಳವರಾಗಿದ್ದಾರೆ. ಇವರ ಅಧೀನದಲ್ಲಿ ಉಪ ಪೊಲೀಸ್ ಆಯುಕ್ತರು, ಕಾನೂನು ಮತ್ತು ಸುವ್ಯವಸ್ಥೆ ಮತ್ತು ಉಪ ಪೊಲೀಸ್ ಆಯುಕ್ತರು, ಅಪರಾಧ ಮತ್ತು ಸಂಚಾರ ಇವರುಗಳು ಕಾರ್ಯನಿರ್ವಹಿಸುತ್ತಾರೆ.

ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯು ಕರ್ನಾಟಕ ಪೊಲೀಸ್ ಕಾಯ್ದೆ 1963 (1964 ರ ಕಾಯ್ದೆ 4) ಸ್ಥಾಪಿತವಾಗಿರುತ್ತದೆ. ರಾಜ್ಯಾದ್ಯಂತ ಪೊಲೀಸ್ ಪಡೆಯ ಆಡಳಿತ ಯಂತ್ರವು ಮಹಾನಿರ್ದೇಶಕರು ಮತ್ತು ಪೊಲೀಸ್ ಮಹಾನಿರೀಕ್ಷಕರ ನಿಯಂತ್ರಣದಲ್ಲಿರುತ್ತದೆ. ಪೊಲೀಸ್ ಆಯುಕ್ತರ ಅಧೀನದಲ್ಲಿ ನಾಲ್ಕು ಮಂದಿ ಸಹಾಯಕ ಪೊಲೀಸ್ ಆಯುಕ್ತರು ಅನುಕ್ರಮವಾಗಿ ಮಂಗಳೂರು ದಕ್ಷಿಣ, ಉತ್ತರ, ಸಂಚಾರ ಮತ್ತು ಕೇಂದ್ರ

ಉಪವಿಭಾಗಾಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿದ್ದು, ಅವರುಗಳು ಪೊಲೀಸ್ ಉಪವಿಭಾಗದ ಪ್ರಭಾರ ಹೊಂದಿರುತ್ತಾರೆ. ಕಛೇರಿಯ ಆಡಳಿತಕ್ಕೆ ಸಂಬಂಧಿಸಿದಂತೆ ನಗರ ಕೇಂದ್ರದಲ್ಲಿ ಪೊಲೀಸ್ ಆಯುಕ್ತರಿಗೆ ಸಹಾಯಕರಾಗಿ ಸಹಾಯಕ ಆಡಳಿತ ಅಧಿಕಾರಿಯವರು ಕಾರ್ಯ ನಿರ್ವಹಿಸುವರು. ಹಾಗೆಯೇ ಕ್ರಿಮಿನಲ್ ಮೊಕದ್ದಮೆಗಳನ್ನು ಅಭಿಯೋಗಗೊಳಿಸುವಲ್ಲಿ ಪೊಲೀಸ್ ಆಯುಕ್ತರಿಗೆ ಸಹಾಯಕರಾಗಿ ಕಾನೂನು ಅಧಿಕಾರಿಗಳು (ಕಿರಿಯ) ಕಾರ್ಯ ನಿರ್ವಹಿಸುತ್ತಾರೆ.

**ಪೊಲೀಸ್ ಇಲಾಖೆಯ ಕೆಳಕಂಡ ಸಾಮಾನ್ಯ ಕಾರ್ಯಗಳನ್ನು ಪ್ರಮುಖವಾಗಿ ನಿರ್ವಹಿಸುತ್ತದೆ.**

1. ನಗರದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವುದು.
2. ಸರ್ಕಾರಕ್ಕೆ ಸಂಬಂಧಿಸಿದಂತೆ ಎಲ್ಲಾ ರೀತಿಯ ದೂರು ನಿರ್ವಹಣೆ.
3. ಎಲ್ಲಾ ರೀತಿಯ ಚುನಾವಣೆಗೆ ಬಂದೋಬಸ್ತ್ ಒದಗಿಸುವುದು.
4. ಅಪರಾಧ ತಡೆಗಟ್ಟುವಿಕೆ, ಅಪರಾಧ ಪತ್ತೆ ಹಾಗೂ ಅಭಿಯೋಗಗೊಳಿಸುವುದು.
5. ಎಲ್ಲಾ ಔಪಚಾರಿಕ ಸಮಾರಂಭಗಳಲ್ಲಿ ಹಾಗೂ ಗಣ್ಯ ವ್ಯಕ್ತಿಗಳು ಭೇಟಿ ನೀಡಿದ ವೇಳೆ ರಾಜ್ಯದ ಶಿಷ್ಟಾಚಾರ ಕಾರ್ಯ ನಿರ್ವಹಿಸುವುದು.
6. ಮೋಟಾರು ವಾಹನಗಳ ಅಧಿನಿಯಮದಡಿಯಲ್ಲಿ ಸಾರಿಗೆ ವಿಷಯಗಳ ತಪಾಸಣೆ ಹಾಗೂ ನಿರ್ವಹಣೆ.
7. ನ್ಯಾಯಾಲಯಗಳಲ್ಲಿ ಸರ್ಕಾರಿ ವ್ಯಾಜ್ಯ ನಿರ್ವಹಣೆ.
8. ಪಾಸ್ ಪೋರ್ಟ್ ಗಳ ಅರ್ಜಿ ವಿಚಾರಣೆ.
9. ಜಿಲ್ಲೆಯಲ್ಲಿ ವಿದೇಶಿಯರ ತಂಗುವಿಕೆ ಕುರಿತಂತೆ ಪರಿಶೀಲನೆ.
10. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ಅಹವಾಲುಗಳಿಗೆ ಸ್ಪಂದಿಸುವುದು.
11. ಭಾರತೀಯ ದಂಡ ಸಂಹಿತೆ, ಭಾರತೀಯ ದಂಡ ಪ್ರಕ್ರಿಯ ಸಂಹಿತೆ, ಹಾಗೂ ಇತರ ಎಲ್ಲಾ ಕಾಯ್ದೆಗಳ ಅಡಿಯಲ್ಲಿ ಕಾರ್ಯ ನಿರ್ವಹಣೆ.
12. ಸಾಮಾಜಿಕ ಹಾಗೂ ರಾಜಕೀಯ ಚಟುವಟಿಕೆಗಳ ಬಗ್ಗೆ ನಿಗಾ ವಹಿಸಿ ಮಾಹಿತಿ ಸಂಗ್ರಹಿಸುವುದು.
13. ಕರ್ನಾಟಕ ಕೆ.ಸಿ.ಎಸ್ ವೃಂದ ಮತ್ತು ನೇಮಕಾತಿ ನಿಯಮಗಳು.
14. ಕುಂದುಕೊರತೆಗಳ ನಿವಾರಣಾ ವ್ಯವಸ್ಥೆ.
15. ಮಹಿಳಾ ಕುಂದುಕೊರತೆಗಳ ನಿವರಣಾ ವ್ಯವಸ್ಥೆ.
16. ಪ್ರಥಮ ವರ್ತಮಾನ ವರದಿಯ ತಯಾರಿ ಹಾಗೂ ನಿರ್ವಹಣೆ ಕುರಿತು.
17. ಬಂದೂಕು ಪರವಾನಿಗೆ ಅರ್ಜಿ ವಿಚಾರಣೆ.

**<u>ಪೊಲೀಸ್ ಆಡಳಿತ</u> :**

ಪೊಲೀಸ್ ಹಾಗೂ ಇನ್ನಿತರ ಕಾನೂನುಗಳಲ್ಲಿ ಸಾಂಪ್ರದಾಯಿಕವಾಗಿ ಪೊಲೀಸ್ ಇಲಾಖೆಗೆ ವಹಿಸಲಾಗಿರುವ ಪ್ರಮುಖ ಕಾರ್ಯಗಳು ಕೆಳಕಂಡಂತಿವೆ.

1. ಸಾರ್ವಜನಿಕ ಕುಂದುಕೊರತೆಗಳಿಗೆ ಸ್ಪಂದಿಸುವುದು.
2. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಕುಂದುಕೊರತೆಗಳಿಗೆ ಸ್ಪಂದಿಸಿ ರಕ್ಷಣೆ ಒದಗಿಸುವುದು.
3. ಕರ್ನಾಟಕ ಪೊಲೀಸ್ ಕಾಯ್ದೆಯಡಿಯಲ್ಲಿ ಬರುವ ಎಲ್ಲಾ ವ್ಯವಹಾರಗಳ ನಿರ್ವಹಣೆ.

**<u>ಕಾನೂನು ಆಡಳಿತ:</u>**

ಪೊಲೀಸ್ ಆಯುಕ್ತರು ಹೊಂದಿರುವ ಆಂತರಿಕ ವ್ಯಾಪ್ತಿಯಲ್ಲಿ ಬರುವ ಕೇಂದ್ರ ಹಾಗೂ ರಾಜ್ಯ ಮಟ್ಟದ ಮುಖ್ಯ ಕಾಯ್ದೆಗಳ ಮತ್ತು ಕಾನೂನುಗಳ ವಿವರ

1. ಭಾರತೀಯ ಆಯುಧ ಕಾಯಿದೆ 1955
2. ಇಂಡಿಯನ್ ಪೆಟ್ರೋಲಿಯಂ ಕಾಯಿದೆ
3. ಕರ್ನಾಟಕ ಸಿನಿಮಾ (ರೆಗ್ಯುಲೇಶನ್) ಕಾಯಿದೆ 1964
4. ಕರ್ನಾಟಕ ಎಕ್ಸಿಬಿಷನ್ ಆಫ್ ಫಿಲಮ್ಸ್ ಆಫ್ ಟಿ.ವಿ. ಸ್ಕ್ರೀನ್ ತ್ರೂ ವಿಸಿಆರ್ (ರೆಗ್ಯುಲೇಶನ್) ಆ್ಯಕ್ಟ್ 1984.
5. ಕರ್ನಾಟಕ ಮುನಿಸಿಪಾಲಿಟಿಸ್ ಆ್ಯಕ್ಟ್1964
6. ಕರ್ನಾಟಕ ಸಿವಿಲ್ ಸರ್ವಿಸ್ (ಸಿಸಿ6ಎ) ರೂಲ್ಸ್ 1957.
7. ಕರ್ನಾಟಕ ಟ್ರೆಜರಿ ಟ್ರೋವ್ ಆ್ಯಕ್ಟ್ 1962.
8. ಕರ್ನಾಟಕ ಸ್ಟಾಂಪ್ಸ್ ಆ್ಯಕ್ಟ್ 1957.
9. ಕರ್ನಾಟಕ ಅಬಕಾರಿ ಕಾಯಿದೆ 1965.
10. ಭಾರತೀಯ ದಂಡ ಸಂಹಿತೆ
11. ಕರ್ನಾಟಕ ಪೊಲೀಸ್ ಅಧಿನಿಯಮ

## ನಗರ ಘಟಕದ ಅಧಿಕಾರಿಗಳ ಮತ್ತು ನೌಕರರ ಅಧಿಕಾರ ಮತ್ತು ಕರ್ತವ್ಯಗಳ ವಿವರ

**ಪೊಲೀಸ್ ಆಯುಕ್ತರು**

- ಸಹಾಯಕ ಆಡಳಿತಾಧಿಕಾರಿಗಳು
  - ಶಾಖಾಧೀಕ್ಷಕರು ಸಿಬ್ಬಂದಿ ಶಾಖೆ → ಪ್ರ.ದ.ಸ → ದ್ವಿ.ದ.ಸ → ಡಿ.ದರ್ಜೆ
  - ಶಾಖಾಧೀಕ್ಷಕರು ಲೆಕ್ಕ ಶಾಖೆ → ಪ್ರ.ದ.ಸ → ದ್ವಿ.ದ.ಸ → ಡಿ.ದರ್ಜೆ
  - ಶಾಖಾಧೀಕ್ಷಕರು ಅಪರಾಧ ಶಾಖೆ → ಪ್ರ.ದ.ಸ → ದ್ವಿ.ದ.ಸ → ಡಿ.ದರ್ಜೆ
- ಉಪ ಪೊಲೀಸ್ ಆಯುಕ್ತರು ಕಾನೂನು ಮತ್ತು ಸುವ್ಯವಸ್ಥೆ. → ನಗರ ವಿಶೇಷ ವಿಭಾಗ → ಪಿಐ → ಪಿಎಸ್ಐ → ಎಎಸ್ಐ → ಹೆಚ್‌ಸಿ → ಪಿಸಿ
- ಉಪ ಪೊಲೀಸ್ ಆಯುಕ್ತರು ಅಪರಾಧ ಮತ್ತು ಸಂಚಾರ → (ಸಿಸಿಆರ್‌ಬಿ, ಸಿಸಿಬಿ, ಸಂಚಾರ ಪೊ.ಠಾ) ಸಹಾಯಕ ಪೊಲೀಸ್ ಆಯುಕ್ತರು → ಪಿಐ → ಪಿಎಸ್ಐ → ಎಎಸ್ಐ → ಹೆಚ್‌ಸಿ → ಪಿಸಿ
- ಉಪ ಪೊಲೀಸ್ ಆಯುಕ್ತರು ನಗರ ಮೀಸಲು ಪಡೆ. → ಸಹಾಯಕ ಪೊಲೀಸ್ ಆಯುಕ್ತರು → ಆರ್‌ಪಿಐ → ಆರ್‌ಎಸ್ಐ → ಎಆರ್‌ಎಸ್ಐ → ಎಹೆಚ್‌ಸಿ → ಎಪಿಸಿ